**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ**
**ಘನ ನ್ಯಾಯಾಲಯದಲ್ಲಿ**

**ಪ್ರಕರಣ ಸಂಖ್ಯೆಃ ಸ್ಪೆಷಲ್ ಕೇಸ್** *31/2021*

ದಿನಾಂಕಃ *18.07.2023*
(ಸಾಕ್ಷಿಗೆ ಪ್ರಮಾಣ **ಮಾಡಿಸಲಾಯಿತು.**)

ಪ್ರಾ.ಸಾಃ *3* (ಚಾ.ಸಾ. *2*)

| | | |
|---|---|---|
| ಹೆಸರು | ಃ | ಪುರುಷೋತ್ತಮ ಪಿ.ಎ. |
| ತಂದೆಯ ಹೆಸರು | ಃ | ಲೇಟ್ ಅಣ್ಣೇಗೌಡ |
| ವಯಸ್ಸು | ಃ | ವರ್ಷ *60* |
| ಉದ್ಯೋಗ | ಃ | ನಿವೃತ್ತ ಎಸ್.ಪಿ. |
| ವಾಸ ಸ್ಥಳ | ಃ | **ಹಾಸನ** |

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ**

*2018* ರಿಂದ *2021* ರವರೆಗೆ ಡಿವೈಎಸ್ಪಿ ರಾಮನಗರದಲ್ಲಿ ನಾನುಕರ್ತವ್ಯ ನಿರ್ವಹಿಸಿರುತ್ತೇನೆ.

*2.* ದಿಃ*04.11.2020* ರಂದು ನಾನು ಕಛೇರಿಯಲ್ಲಿದ್ದಾಗ ಮಧ್ಯಾಹ್ನ *01.00* ಗಂಟೆಗೆ ಚಾಸಾ *1* ರವರು ಈ ಪ್ರಕರಣದ ಗಾಂಜಾ ವಶಪಡಿಸಿಕೊಳ್ಳುವ ಸಂಬಂಧ ದಾಳಿ ಮಾಡುವುದಕ್ಕೆ ಅನುಮತಿ ಕೋರಿದ್ದರು. ನಾನು ಅದಕ್ಕೆ ಅನುಮತಿ ಕೊಟ್ಟಿರುತ್ತೇನೆ. ಸದರಿ ಪತ್ರವನ್ನು ನಿಪಿ *1* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ *1*(ಬಿ) ಎಂದು ಗುರುತಿಸಲಾಯಿತು. ಆ ನಂತರ ಪುರ ಪೊಲೀಸ್ ಠಾಣೆಗೆ ಮಧ್ಯಾಹ್ನ *01.15* ಗಂಟೆ ಆಗಿತ್ತು. ಆಗಲೇ ಚಾಸಾ *1* ರವರು ಪಂಚರಾದ ಚಾಸಾ *3* ಮತ್ತು *4* ರವರನ್ನು ಠಾಣೆಗೆ ಬರಮಾಡಿಕೊಂಡಿದ್ದರು. ಅಲ್ಲಿಂದ ನಾನು, ಚಾಸಾ *1*, ಪಂಚರು ಮತ್ತು ಪೊಲೀಸ್ ಸಿಬ್ಬಂದಿಯವರು ಮಧ್ಯಾಹ್ನ *01.30* ಗಂಟೆಗೆ ಬಾಲಗೇರಿ ಮತ್ತು ಆರ್ಎಂಸಿ ಮಾರುಕಟ್ಟೆ ರಸ್ತೆಯಲ್ಲಿ ಬರುವ ಸ್ಥಳಕ್ಕೆ ಹೋದೆವು. ಸ್ವಲ್ಪ ದೂರದಲ್ಲಿ ನಮ್ಮ ವಾಹನಗಳನ್ನು ನಿಲ್ಲಿಸಿ ಪರಿಶೀಲಿಸಿದಾಗ ಅಲ್ಲಿ ಒಬ್ಬ ಆಸಾಮಿ ಇದ್ದನು. ನಾವು ಮತ್ತು ನಮ್ಮ ಸಿಬ್ಬಂದಿ ಸೇರಿ ಆರೋಪಿಯನ್ನು ಹಿಡಿದೆವು.

ಅಂಗಶೋಧನೆ ಮಾಡಲು ಆರೋಪಿಗೆ ನೋಟಿಸ್ ಕೊಟ್ಟು, ಸಾಕ್ಷಿ ಗುರುತಿಸಿದ ಸದರಿ ನೋಟಿಸನ್ನು ನಿ ಪಿ *4* ಎಂದು ಗುರುತಿಸಲಾಯಿತು. ಆರೋಪಿಗೆ ನೋಟಿಸ್ ಕೊಟ್ಟು ನಿಮ್ಮ ಅಂಗ ಶೋಧನೆಯನ್ನ ಗೆಜೆಟೆಡ್ ಅಧಿಕಾರಿ ಮಾಡಬೇಕಾ ಅಥವಾ ಪೊಲೀಸ್ ಅಧಿಕಾರಿ ಮಾಡಬೇಕಾ ಎಂದು ಕೇಳಿದಾಗ ಗೆಜೆಟೆಡ್ ಅಧಿಕಾರಿ ಮಾಡಬಹುದು ಎಂದು ತಿಳಿಸಿದರು. ಆಗ ಆರೋಪಿಯ ಅಂಗ ಶೋಧನೆ ಮಾಡಿದಾಗ ಆತನ ಬಳಿ ಬಿಳಿ ಬಣ್ಣದ ಪ್ಲಾಸ್ಟಿಕ್ ಬ್ಯಾಗ್ ಇದ್ದು ಅದರಲ್ಲಿ ಒಣಗಿದ ಗಾಂಜಾ ಸೊಪ್ಪು ಇತ್ತು. ಅಲ್ಲೇ ಹತ್ತಿರದಿಂದ ತೂಕದ ಯಂತ್ರವನ್ನು ತರಿಸಿದೆವು. ಸದರಿ ಗಾಂಜಾವನ್ನು ತೂಕ ಮಾಡಿದಾಗ ಅದರಲ್ಲಿ ಒಟ್ಟು *7* ಕೆ.ಜಿ. *745* ಗ್ರಾಂ ಇತ್ತು. ಚಾಸಾ *1* ರವರಿಗೆ ಅಮಾನತ್ತು ಮಾಡುವುದಕ್ಕೆ ತಿಳಿಸಿದೆನು. ಚಾಸಾ *1* ರವರು ಮಧ್ಯಾಹ್ನ *01.45* ರಿಂದ *02.45* ರವರೆಗೆ ಮಹಜರ್ ಮಾಡಿ ಬಿಳಿ ಬಟ್ಟೆಯ ಚೀಲಕ್ಕೆ ಹಾಕಿ ಬಾಯಿ ಕಟ್ಟಿ ಆರ್ ಅಕ್ಷರದಿಂದ ಸೀಲ್ ಮಾಡಿ ವಶಪಡಿಸಿಕೊಂಡರು. ಸಾಕ್ಷಿ ಗುರುತಿಸಿದ ಪಂಚನಾಮೆಯನ್ನು ಈಗಾಗಲೇ ನಿಪಿ *5* ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ *5(ಸಿ)* ಎಂದು ಗುರುತಿಸಲಾಯಿತು. ಅವತ್ತು ನಾವು ಹಿಡಿದ ವ್ಯಕ್ತಿ ನ್ಯಾಯಾಲಯದ ಮುಂದೆ ಇರುವ ಆರೋಪಿ ಆಗಿರುತ್ತಾರೆ. ನಾನು ನನ್ನ ಕಚೇರಿಗೆ ವಾಪಸ್ಸು ಹೋದೆ. ದಿಃ*04.12.2020* ರಂದು ದೋಷಾರೋಪಣಾ ಪಟ್ಟಿ ಸಲ್ಲಿಸಲು ಮತ್ತು ಮುಂದಿನ ತನಿಖೆಯನ್ನು ನೆರವೇರಿಸಲು ಚಾಸಾ *13* ರವರೆಗೆ ಅನುಮತಿ ಕೊಟ್ಟಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ.ಜಿ.ಆರ್. ವಕೀಲರಿಂದಃ</u>**

ನಿಪಿ *1* ರಲ್ಲಿ ಅನುಮತಿ ಕೊಟ್ಟ ಸಮಯ ಮತ್ತು ದಿನಾಂಕ ತೋರಿಸಿಲ್ಲ ಎಂದರೆ ಸರಿ. ನಾನು ಲಿಖಿತ ರೂಪದಲ್ಲಿ ಪ್ರತ್ಯೇಕವಾಗಿ ಅನುಮತಿ ಕೊಟ್ಟಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋದ ಇಲಾಖಾ ಜೀಪ್ ನಂಬರ್ ನೆನಪಿಲ್ಲ. ನಾನು ಚಾಸಾ *1* ರವರು ಸೇರಿಕೊಂಡು ಆರೋಪಿ ವಿರುದ್ಧ ಅಂಕಿಅಂಶಿಗೋಸ್ಕರ ಸುಳ್ಳು ಕೇಸ್ ದಾಖಲು ಮಾಡಿಕೊಂಡು, ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ. ಆ ದಿವಸ ಆರೋಪಿ ಯಾವುದೇ ಗಾಂಜಾ

ಹೊಂದಿರಲಿಲ್ಲ. ಅವರನ್ನು ನಾವು ಹಿಡಿದಿಲ್ಲ. ಪಂಚನಾಮೆಯಲ್ಲಿ ಯಾವುದೇ ಗಾಂಜಾ ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ವಶದಿಂದ ಗಾಂಜಾ ವಶಪಡಿಸಿಕೊಂಡ ಬಗ್ಗೆ ಆರೋಪಿಯನ್ನು ದಸ್ತಗಿರಿ ಮಾಡಿದ ಬಗ್ಗೆ ಚಾಸಾ *1* ರವರು ವರದಿ ಮಾಡಿದ್ದಾರೆಯೇ ಎಂದರೆ ಇಲ್ಲ.

**ಮರುವಿಚಾರಣೆಃ ಇಲ್ಲ.**

***(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).***

**ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.**

*(ನಿಂಗಪ್ಪ ಪರಶುರಾಮ ಕೋಪರ್ಡೆ)*
**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ರಾಮನಗರ.**

***(ಈ ಹಂತದಲ್ಲಿ ಸದರಿ ಸಾಕ್ಷಿಯು ಅಭಿಯೋಜನ ಪಕ್ಷದ ಪ್ರಕರಣಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿಯುತ್ತಿಲ್ಲವಾದ ಕಾರಣ ಆತನನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದರ ಮೇರೆಗೆ ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಅಭಿಯೋಜಕರ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ.)***

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದ ಃ</u>**